**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ.ರವರ ನ್ಯಾಯಾಲಯ, ಜೇವರ್ಗಿ**

**ಸಿ.ಸಿ.ನಂಃ 459/2022**

ಪಿರ್ಯಾರ್ದುದಾರಃ 1. ಶ್ರೀಮತಿ ಗಿರಿಜಮ್ಮ ಗಂಡ ಚಂದ್ರಶೇಖರ ಮಡಿವಾಳ,
ವಃ 51 ವರ್ಷ, ಉದ್ಯೋಗಃ ಲಾಂಡ್ರಿ ಶಾಪ್ ಮತ್ತು ಟೇಲರಿಂಗ
ವಾಸಃ ಟೀಚರ್ ಕಾಲೋನಿ ಜೇವರ್ಗಿ
ತಾಃ ಜೇವರ್ಗಿ, ಜಿಃ ಕಲ್ಬುರ್ಗಿ

**ವಿರುದ್ಧ**

ಆರೋಪಿ 1. ಕೃಷ್ಣಪ್ಪ ತಂದೆ ನಿಂಗಪ್ಪ ನಾಟೀಕಾರ
ವಃ 39 ವರ್ಷ, ಉದ್ಯೋಗಃ ಖಾಸಗಿ ಕೆಲಸ
ವಾಸಃ ಚನ್ನೂರ ತಾಃ ಜೇವರ್ಗಿ ಜಿಃ ಕಲ್ಬುರ್ಗಿ

**ಆಪಾದನೆ**

ನಾನು **ಸಂದೀಪ್.ಎ.ನಾಯಿಕ್**
ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಜೇವರ್ಗಿ.

ಆರೋಪಿಯಾದ ನೀವು, 1. ಕೃಷ್ಣಪ್ಪ ತಂದೆ ನಿಂಗಪ್ಪ ನಾಟೀಕಾರ
ವಃ 39 ವರ್ಷ, ಉದ್ಯೋಗಃ ಖಾಸಗಿ ಕೆಲಸ
ವಾಸಃ ಚನ್ನೂರ ತಾಃ ಜೇವರ್ಗಿ ಜಿಃ ಕಲ್ಬುರ್ಗಿ

ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ಆರೋಪಿಯಾದ ನೀವು ದಿನಾಂಕ 15-01-2021 ರಂದು ಫಿರ್ಯಾದುದಾರರಿಂದ ತಮ್ಮ ಅವಶ್ಯಕತೆಗಾಗಿ ರೂ.5,00,000/- ಹಣ ಸಾಲವಾಗಿ ಪಡೆದು ಸದರಿ ಸಾಲದ ಮರುಪಾವತಿಗಾಗಿ ದಿನಾಂಕ 16-08-2021 ರ ಜೇವರ್ಗಿಯ ಆ್ಯಕ್ಸಿಸ್ ಬ್ಯಾಂಕ್ ಲಿಮಿಟೆಡ್ ಬ್ಯಾಂಕಿನ ಚೆಕ್ ನಂ.021829 ಚೆಕ್ಕನ್ನು ರೂ.5,00,000/-ಗಳಿಗೆ ನೀಡಿದ್ದು ಸದರಿ ಚೆಕ್ಕನ್ನು ಪಿರ್ಯಾದಿದಾರರು ನಗದೀಕರಿಸಲು ತಮ್ಮ ಬ್ಯಾಂಕಿಗೆ ಸಲ್ಲಿಸಿದಾಗ ಸದರಿ ಚೆಕ್ ಅಮಾನ್ಯಗೊಂಡು ವಾಪಾಸಾಗಿದ್ದು ಸದರಿ ಚೆಕ್ ವಾಪಾಸಾಗಿದ್ದ ವಿಚಾರವನ್ನು ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ನೋಟಿಸ್ ನೀಡಿ ಸದರಿ ಹಣವನ್ನು 15 ದಿನಗಳ ಒಳಗೆ ಪಾವತಿಸುವಂತೆ ನಿಮ್ಮನ್ನು ಕೋರಿದ್ದರೂ ಸಹ ಆರೋಪಿಯಾದ ನೀವು ಉದ್ದೇಶಪೂರ್ವಕವಾಗಿ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣ ಇಲ್ಲ ಎಂದು ಗೊತ್ತಿದ್ದರೂ ಸಹ ಫಿರ್ಯಾದುದಾರರಿಗೆ ಮೋಸ ಮಾಡಬೇಕೆನ್ನುವ ಉದ್ದೇಶದಿಂದ ಆ್ಯಕ್ಸಿಸ್ ಬ್ಯಾಂಕ್ ಲಿಮಿಟೆಡ್ ಬ್ಯಾಂಕಿನ ಚೆಕ್ಕನ್ನು ನೀಡಿ ಸದರಿ ಚೆಕ್ ಅಮಾನ್ಯಗೊಳ್ಳುವಂತೆ ಮಾಡಿದ ಕಾರಣ ವರ್ಗಾವಣೆಯ ಲಿಖಿತಪತ್ರಗಳ ಅಧಿನಿಯಮ ಕಾಯ್ದೆ ಕಲಂ 138 ರ ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞೆಯೊಳಗೆ ಎಸಗಿದ್ದೀರಿ ಅಂತಾ ನಿಮ್ಮ ಮೇಲೆ ಆರೋಪಿಸಲಾಗಿದೆ.

ಸದರಿ ಆಪಾದನೆ ಬಗ್ಗೆ ವಿಚಾರಣೆಗೆ ಗುರಿಯಾಗಬೇಕೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ಸದರಿ ಮೇಲಿನ ಆರೋಪಣೆಯನ್ನು ತೆರೆದ ನ್ಯಾಯಾಲಯದಲ್ಲಿ ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ನಮೂದಿಸಿಕೊಳ್ಳಲಾಯಿತು.

**ಈ ಮೇಲ್ಕಂಡ ಆರೋಪಗಳ ಬಗ್ಗೆ ವಿಚಾರಣೆಗೆ ಈ ಕೆಳಕಂಡಂತೆ ಆದೇಶಿಸುತ್ತೇನೆ.**

ಪ್ರಶ್ನೆ-1ಃ ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ಓದಿ ಹೇಳಿದ್ದು ಅರ್ಥವಾಯಿತೇ?
ಆರೋಪಿಯ ಉತ್ತರಃ

ಪ್ರಶ್ನೆ-2ಃ ಸದರೀ ಆಪಾದನೆಗಳನ್ನು ಒಪ್ಪಿಕೊಳ್ಳುವೆಯೋ? ಅಥವಾ
ವಿಚಾರಣೆಯಾಗಬೇಕೋ?
ಆರೋಪಿಯ ಉತ್ತರಃ

ಮೇಲ್ಕಂಡ ಎಲ್ಲಾ ಆಪಾದನೆಗಳನ್ನು ನನ್ನ ಸಮಕ್ಷಮ ಓದಿ ಹೇಳಿ ಆತನ ಹೇಳಿಕೆಯನ್ನು ಪಡೆದುಕೊಂಡು ಸತ್ಯವಾಗಿದೆ ಎಂದು ದೃಢೀಕರಿಸುತ್ತೇನೆ.

(ಸಂದೀಪ್.ಎ.ನಾಯಿಕ್)
ದಿಃ 16-10-2024
ಹಿರಿಯ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು,
ಜೇವರ್ಗಿ

Accused present.

Plea framed, readover and explained to accused in his vernacular language  pleaded not guilty and submitted that he has defence to be tried.

For complainant side evidence by 04-03-2024

Sr.CJ & JMFC.,Jewargi